ಯಜಮಾನ ಬಾಗಿಲು ತೆಗೆದು ಏನೆಂದು ವಿಚಾರಿಸಿದ. ಆಗ ಆ ಯುವಕ ತಾನು ಬುದ್ಧನನ್ನು ಕಾಣಲು ಹೋಗುತ್ತಿರುವುದಾಗಿ ಹೇಳಿ, ಆ ರಾತ್ರಿ ಅಲ್ಲಿ ಆಶ್ರಯ ಕೊಡುವಂತೆ ಕೇಳಿಕೊಂಡ. ಯಜಮಾನ ತನ್ನ ಮಗಳನ್ನು ಕರೆದು, ಅತಿಥಿಗೆ ಊಟ ಕೊಟ್ಟು, ತಂಗಲು ವ್ಯವಸ್ಥೆ ಮಾಡುವಂತೆ ಹೇಳಿದ. ಮಾರನೇ ದಿನ ಬೆಳಿಗ್ಗೆ ಹೊರಡಲು ಅಣಿಯಾದ ಯುವಕನಿಗೆ ಯಜಮಾನ, 'ನನ್ನದೊಂದು ಕೋರಿಕೆ ಇದೆ. ನನಗಿರುವುದು ಒಬ್ಬಳೇ ಮಗಳು, ಅವಳಿಗೆ ಮಾತು ಬರುವುದಿಲ್ಲ. ಬುದ್ಧನನ್ನು ಭೇಟಿಯಾದಾಗ ಅವಳಿಗೆ ಯಾವಾಗ ಮಾತು ಬರುತ್ತದೆ ಎಂದು ಕೇಳುವಿರಾ?' ಎಂದ. ಯುವಕನಿಗೆ ಅಯ್ಯೋ ಪಾಪ ಎಂದು ಅನಿಸಿತು. ಇಷ್ಟು ಒಳ್ಳೆಯ ಹಾಗೂ ಸುಂದರ ಹುಡುಗಿ ಮೂಕಿಯೇ ಎಂದುಕೊಳ್ಳುತ್ತ, ಖಂಡಿತ ಕೇಳುತ್ತೇನೆ ಎಂದು ಮಾತು ಕೊಟ್ಟ.

ಹಾಗೆಯೇ ಮುಂದೆ ಹೊರಟ. ಒಂದು ನದಿಯನ್ನು ದಾಟಬೇಕಾಯಿತು. ಅಲ್ಲಿ ದೋಣಿ ತೆಪ್ಪಗಳಾವೂ ಕಾಣಲಿಲ್ಲ. ಅಲ್ಲಿದ್ದ ಒಂದು ದೊಡ್ಡ ಆಮೆ ಅವನ ಚಿಂತೆಯನ್ನು ಕಂಡು, ನದಿ ದಾಟಬೇಕೆ? ಎಲ್ಲಿಗೆ ಹೊರಟಿರುವೆ? ಎಂದು ಕೇಳಲು ಆ ಯುವಕ ತಾನು ಬುದ್ಧನನ್ನು ಕಂಡು ಪ್ರಶ್ನೆ ಕೇಳಲು ಹೊರಟಿರುವುದಾಗಿ ಹೇಳಿದನು. ಆಗ ಆಮೆ, 'ನಾನು ನಿನ್ನನ್ನು ಆ ದಡ ಮುಟ್ಟಿಸುತ್ತೇನೆ. ನನಗೆ ಮುಕ್ತಿ ಯಾವಾಗ ದೊರಕುತ್ತದೆ ಎಂದು ಬುದ್ಧನಿಗೆ ಕೇಳಿ ಬರುವೆಯಾ' ಎಂದಿತು.

ಹಾಗೇ ಆಗಲಿ ಎಂದ ಯುವಕ. ನದಿ ದಾಟಿದ ಯುವಕ ಮುಂದೆ ಬುದ್ಧನ ಬಳಿ ಹೋಗಿ ತಲುಪಿದ. ಬುದ್ಧನ ತೇಜಸ್ಸು ಹಾಗೂ ಶಾಂತಚಿತ್ತ ಮುಖ ಅವನ ಮನಸ್ಸನ್ನು ಸೆಳೆಯಿತು. ಬುದ್ಧನಿಗೆ ನಮಸ್ಕರಿಸುತ್ತ ತನ್ನ ಕೆಲವು ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಕೋರಿದ. ಆಗ ಬುದ್ಧ, ಸರಿ, ನೀನು ಎರಡು ಪ್ರಶ್ನೆಗಳನ್ನು ಮಾತ್ರ ಕೇಳಬಹುದು ಎಂದ. ಯುವಕ ತನ್ನಲ್ಲೇ ಸ್ವಲ್ಪ ಯೋಚಿಸಿದ. ಮೊದಲು ತನಗೆ ಆಶ್ರಯ ಕೊಟ್ಟ ಯಜಮಾನನ ಪ್ರಶ್ನೆ ಕೇಳುವುದೇ ಉಚಿತವೆನಿಸಿತು. ಯಜಮಾನರ ಮಗಳಿಗೆ ಮಾತು ಎಂದು ಬರುವುದು ಎಂದು ಪ್ರಶ್ನಿಸಿದ್ದಕ್ಕೆ, ಬುದ್ಧ ನಸುನಗುತ್ತ 'ಅವಳು ಮದುವೆಯಾಗ ಬಯಸುವ ಹುಡುಗ ಅವಳೆದುರು ಬಂದಾಗ ಅವಳಿಗೆ ಮಾತು ಬರುತ್ತದೆ' ಎಂದು ಉತ್ತರಿಸಿದ.

ನಿನ್ನ ಎರಡನೇ ಪ್ರಶ್ನೆ ಏನು ಕೇಳು ಎಂದಾಗ, ಯುವಕನಿಗೆ ತನ್ನ ಕುರಿತಾದ ಪ್ರಶ್ನೆಗಿಂತ, ಸಹಾಯ ಮಾಡಿದ್ದ ಆ ಆಮೆಯ ಪ್ರಶ್ನೆಯನ್ನು ಕೇಳುವುದೇ ಉಚಿತವೆನಿಸಿ, ಆ ಆಮೆಗೆ ಮುಕ್ತಿ ಸಿಗುವುದು ಯಾವಾಗ ಎಂದು ಕೇಳಿದ. ಬುದ್ಧ 'ಆಮೆ ತನ್ನ ಕವಚವನ್ನು ತೆಗೆದೆಸೆದಾಗ ಮುಕ್ತಿ ಸಿಗುತ್ತದೆ.ಇನ್ನು ನೀನು ಹೋಗಬಹುದು. ನಿನ್ನ ಎರಡು ಪ್ರಶ್ನೆಗಳೂ ಆದವಲ್ಲ' ಎಂದ. ತನ್ನ ಪ್ರಶ್ನೆ ಕೇಳಲು ಅವಕಾಶ ಸಿಗದೇ ಹೋದರೂ, ಅವರಿಬ್ಬರ ಪ್ರಶ್ನೆಗೆ ಉತ್ತರ ಸಿಕ್ಕಿದ್ದು ಏನೋ ಸಮಾಧಾನವಾದಂತಾಯಿತು ಆ ಯುವಕನಿಗೆ. ಬುದ್ಧನಿಗೆ ನಮಸ್ಕರಿಸಿ ಬಂದ ದಾರಿಯಲ್ಲೇ ಹೊರಟ.

ನದಿಯ ಬಳಿ ಬಂದಾಗ, ಇವನನ್ನು ಕಂಡ ಆಮೆ ಹತ್ತಿರ ಬಂದು ತನ್ನ ಪ್ರಶ್ನೆಗೆ ಉತ್ತರ ಸಿಕ್ಕಿತೆ ಎಂದು ಕೇಳಿತು. ಆಗ ಆ ಯುವಕ ಬುದ್ಧ ಹೇಳಿದ್ದನ್ನು ಹೇಳಿದ. ತಕ್ಷಣ ಆಮೆ ತನ್ನ ಕವಚವನ್ನು ತೆಗೆಯತೊಡಗಿತು. ಕವಚ ಹೊರ ಬರುತ್ತಿದ್ದಂತೆ ಅದರಿಂದ ವಜ್ರದ ಹರಳು ಉದುರ ತೊಡಗಿದವು. ಆಮೆ ಯುವಕನಿಗೆ ಅವುಗಳನ್ನು ತೆಗೆದುಕೊಳ್ಳುವಂತೆ ಹೇಳಿತು. ಹಾಗೆಯೇ ಮುಕ್ತಿ ಪಡೆಯಿತು. ಅಚ್ಚರಿಯಿಂದ ವಜ್ರಗಳನ್ನು ತೆಗೆದುಕೊಂಡ ಯುವಕ ನದಿಯನ್ನು ದಾಟಿ ಮುಂದೆ ಆ ಯಜಮಾನರ ಮನೆಗೆ ಬಂದ. ಅವನನ್ನು ಸ್ವಾಗತಿಸಿದ ಯಜಮಾನ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತೆ? ಎಂದು ಕೇಳಿದ. ಯುವಕ ಬುದ್ಧ ಕೊಟ್ಟ ಉತ್ತರವನ್ನು ಹೇಳಿದ. ಆಗ ಅಲ್ಲಿಯೇ ಇದ್ದ ಮಗಳು ನಾಚುತ್ತ ಇವನನ್ನು ಕುರಿತು ನಾನು ನಿಮ್ಮನ್ನು ಮದುವೆಯಾಗಲು ಬಯಸುತ್ತೇನೆ. ಒಪ್ಪಿಗೆಯೇ ಎಂದು ಕೇಳಿದಳು. ಅವಳಿಗೆ ಮಾತು ಬಂದದ್ದು ನೋಡಿ ಯಜಮಾನನಿಗೆ ಬಹಳ ಸಂತೋಷವಾಯಿತು. ಯುವಕನೂ ಸಂತೋಷದಿಂದ ಮದುವೆಗೆ ಒಪ್ಪಿದ. ಯಜಮಾನ ತನ್ನ ವ್ಯವಹಾರವನ್ನು ಯುವಕನಿಗೆ ವಹಿಸಿಕೊಟ್ಟ. ಹೀಗೆ ಪ್ರಶ್ನೆ ಕೇಳುವಲ್ಲಿ ಯುವಕ ತೋರಿದ ನಿಸ್ವಾರ್ಥ ಮನೋಭಾವ ಅವನ ಪ್ರಶ್ನೆಗೂ ಉತ್ತರ ದೊರಕಿಸಿ ಕೊಟ್ಟಿತು! ■



# ಕಾಡಿನ ಯಾತ್ರೆ

■ **ಅಮೃತೇಶ್ವರ ತಂಡರ ಅಣ್ಣಿಗೇರಿ**

ಕಾಡನು ನೋಡುವ
ಹಂಬಲದಿಂದ
ಬಂದನು ಪುಟ್ಟ ಖುಷಿಯಲ್ಲಿ
ಹಾಡನು ಹಾಡುತ
ಕುಣಿ ಕುಣಿದಾಡುತ
ಹೊರಟನು ಗೆಳೆಯರ ಜೊತೆಯಲ್ಲಿ!

ಜುಳು ಜುಳು ಹರಿಯುವ
ನದಿಯಲಿ ಇಳಿದು
ಜಳ ಜಳ ಜಳಕವ ಮಾಡಿದರು
ಪುಟು ಪುಟು ಓಡುವ
ಮೊಲಗಳನೆಲ್ಲ
ಹಿಡಿಯಲು ಕಾಡೊಳು ಹೋಗಿಹರು!

ತಕ ತಕ ಕುಣಿಯುವ
ನವಿಲನು ಕಂಡು
ತಾವೂ ಹೆಜ್ಜೆಯ ಹಾಕಿದರು
ಕುಹೂ ಕುಹೂ ಕೂಗುವ
ಕೋಗಿಲೆ ಹಾಗೆ
ರಾಗವ ತೆಗೆದು ಬೀಗಿದರು!

ಸರ ಸರ ಹರಿಯುವ
ಸರ್ಪವ ಕಂಡು
ಗಾಬರಿಯಿಂದ ಓಡಿದರು
ಹೆಬ್ಬುಲಿರಾಯನ
ಗರ್ಜನೆ ಕೇಳಿ
ಗಲಿಬಿಲಿ ಗೊಂಡು ನಡುಗಿದರು!

ಆಲದ ಮರದಾ
ಬಿಳಿಲನು ಹಿಡಿದು
ತೂಗುಯ್ಯಾಲೆಯ ಆಡಿದರು
ಧುಮುಕುವ ಝರಿಯ
ಅಬ್ಬರವನ್ನು
ತಬ್ಬಿಬ್ಬಾಗಿ ನೋಡಿದರು!

ಕಾಡನು ಅಲೆದು
ಸುಸ್ತಾಗಿತ್ತು
ನೆರಳಲಿ ಊಟವ ಮಾಡಿದರು!
ಗುಡು ಗುಡು ಎಂದು
ಗುಡುಗಿತು ಮೋಡ
ಎಲ್ಲರೂ ಮನೆಯೆಡೆ ಓಡಿದರು! ■